ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 764
ಉತ್ತರಿಸುವ ದಿನಾಂಕ : 10.03.2020
ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗಣಿ ಪ್ರದೇಶಗಳ ಹೊರತಾಗಿ ಹೊಸ ಗಣಿ ಪ್ರದೇಶಗಳಲ್ಲಿ (ಚಿನ್ನ, ಕಬ್ಬಿಣ, ಕಲ್ಲು ಹಾಗೂ ಇತರೆ ಲೋಹಗಳು) ಅನ್ವೇಷಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು:	ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಗಣಿ ಪ್ರದೇಶಗಳನ್ನು ಹೊರತುಪಡಿಸಿ ಒಟ್ಟು 07 ಪ್ರದೇಶಗಳನ್ನು ಹೊಸದಾಗಿ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ಅದಿರಿಗಾಗಿ ಗುರುತಿಸಿ ಖನಿಜಾನ್ವೇಷಣೆ ಕೈಗೊಳ್ಳಲು ಭಾರತ ಸರ್ಕಾರದ ಸಂಸ್ಥೆಗಳಾದ MECL & KIOCL ರವರಿಗೆ ವಹಿಸಲಾಗಿರುತ್ತದೆ. MMDR 1957ರ ತಿದ್ದುಪಡಿ ಕಾಯ್ದೆ – 2015 ರಂತೆ ದಿನಾಂಕ: 31.03.2020 ಕ್ಕೆ ಅಂತ್ಯಗೊಳ್ಳುವ ಗಣಿ ಗುತ್ತಿಗೆ ಪ್ರದೇಶಗಳನ್ನು ಹರಾಜಿಗೊಳಪಡಿಸಲು G2 Level ಹಂತದ ಖನಿಜಾನ್ವೇಷಣೆ ನಡೆಸಬೇಕಾಗಿರುತ್ತದೆ. ಅಂತಹ ಬ್ಲಾಕುಗಳನ್ನು ಸಂಪನ್ಮೂಲ ಸಾಮರ್ಥ್ಯ ಹೊಂದಿರುವಂತೆ ಮಾಡಲು 2020 ಕ್ಕೆ ಅಂತ್ಯಗೊಳ್ಳುವ ಅಕ್ಕಪಕ್ಕದ ಗಣಿ ಗುತ್ತಿಗೆಗಳನ್ನು ಸಂಯುಕ್ತಗೊಳಿಸಿ (Amalgamation) ಬ್ಲಾಕುಗಳನ್ನು ಮಾರ್ಪಡಿಸಲಾಗಿದೆ. ಒಟ್ಟು 16 ಕಬ್ಬಿಣದ ಮತ್ತು ಮ್ಯಾಂಗನೀಸ್ ಅದಿರಿನ ಬ್ಲಾಕ್‌ಗಳನ್ನು ಸಿದ್ದಪಡಿಸಿ ಖನಿಜಾನ್ವೇಷಣೆ ಕೈಗೊಳ್ಳಲು ಸಾರ್ವಜನಿಕ ಉದ್ದಿಮೆಗಳಾದ MECl & KIOCL ರವರಿಗೆ ವಹಿಸಲಾಗಿರುತ್ತದೆ. ಭಾರತ ಸರ್ಕಾರವು ದೇಶದಾದ್ಯಂತ ಖನಿಜಾನ್ವೇಷಣೆ ಕೈಗೊಳ್ಳಲು National Mineral Exploration Trust ಅನ್ನು ಸ್ಥಾಪಿಸಿದ್ದು, ಪ್ರಧಾನ ಖನಿಜಗಳ ರಾಜಸ್ವದ ಶೇಕಡ 2ರಷ್ಟು ನಿಧಿಯನ್ನು ಸಂಗ್ರಹಿಸಿರುತ್ತದೆ. ಸದರಿ ಟ್ರಸ್ಟ್‌ನ ಮುಖಾಂತರ ರಾಜ್ಯದಲ್ಲಿ ಕಬ್ಬಿಣದ ಅದಿರಿನ 01, ಒಟ್ಟು 09 ಬ್ಲಾಕ್‌ಗಳಲ್ಲಿ ಖನಿಜಾನ್ವೇಷಣೆ ಕೈಗೊಳ್ಳಲು MECL, KIOCL & NMDC ರವರಿಗೆ ಅನುಮತಿ ನೀಡಿರುತ್ತದೆ. ಮೇಲಿನ ಬ್ಲಾಕ್‌ಗಳನ್ನು ಹೊರತುಪಡಿಸಿ ಭಾರತ ಸರ್ಕಾರದ ಭಾರತೀಯ ಸರ್ವೇಕ್ಷಣಾ ಇಲಾಖೆಯು ತನ್ನ ವಾರ್ಷಿಕ ಗುರಿಯಂತೆ ದೇಶದಾದ್ಯಂತ ಖನಿಜಾನ್ವೇಷಣೆ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇಲಾಖೆಯಲ್ಲಿ ಖನಿಜಾನ್ವೇಷಣೆ ವಿಭಾಗವನ್ನು (Mineral Exploration

Wing) ಸ್ಥಾಪಿಸಿ ಹೊಸ ಖನಿಜಗಳನ್ನು ಪತ್ತೆ ಹಚ್ಚಲು ಯೋಜನೆ ಹಮ್ಮಿಕೊಳ್ಳಲಾಗಿದೆ.

ಆ) ಪ್ರಸ್ತುತ ನಡೆಯುತ್ತಿರುವ ಗಣಿ ಪ್ರದೇಶಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)

ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಖನಿಜ ಗಣಿಗಾರಿಕೆಗೆ ಅಧಿಕೃತವಾಗಿ ಗುತ್ತಿಗೆ ಮಂಜೂರಾತಿ ನೀಡಿರುವ ವಿವರ ಕೆಳಕಂಡಂತಿರುತ್ತದೆ.

ಕ್ರಸಂ.	ಖನಿಜದ ವಿಧ	ಗುತ್ತಿಗೆಗಳ ಸಂಖ್ಯೆ	ವಿಸ್ತೀರ್ಣ (ಎಕರೆಗಳಲ್ಲಿ)	ಕಾರ್ಯನಿರತ ಗಣಿ/ಕಲ್ಲುಗಣಿ ಗುತ್ತಿಗೆಗಳು
1	ಮುಖ್ಯ ಖನಿಜ	379	97107.28	120
2	ನಿರ್ದಿಷ್ಟ ಉಪ ಖನಿಜ (ಗ್ರಾನೈಟ್)	470	2353.06	305
3	ನಿರ್ದಿಷ್ಟವಲ್ಲದ ಉಪ ಖನಿಜ (ಮರಳು ಹೊರತುಪಡಿಸಿ)	2493	1056.31	1756
4	ಮರಳು	281	3632.17	281

ಇ) ಕಳೆದ ಮೂರು ವರ್ಷಗಳಿಂದ ಸರ್ಕಾರಕ್ಕೆ ದೊರೆತ ಆದಾಯವೆಷ್ಟು

ಕಳೆದ ಮೂರು ವರ್ಷಗಳಲ್ಲಿ ಗಣಿಗಾರಿಕೆಯಿಂದ ಸಂಗ್ರಹಿಸಿರುವ ಆದಾಯದ ವಿವರ ಕೆಳಕಂಡಂತಿರುತ್ತದೆ.

(ರೂ.ಕೋಟಿಗಳಲ್ಲಿ)

ಕ್ರಸಂ.	ವರ್ಷ	ರಾಜಸ್ವಗುರಿ	ಸಂಗ್ರಹಣೆ
1	2017–18	2550.00	2746.26
2	2018–19	3000.00	3026.42
3	2019–20 **(ಫೆಬ್ರವರಿ 15.02.2020 ರವರೆಗೆ ಸಂಗ್ರಹಣೆ)**	3550.00	2979.40

ಸಂಖ್ಯೆ: ಸಿಐ 14 ಎಂಪಿಪಿ 2020

(ಸಿ.ಸಿ ಪಾಟೀಲ)
ಗಣಿ ಮತ್ತು ಭೂ ವಿಜ್ಞಾನ ಸಚಿವರು.